ಕಾರ್ಯಾಚರಣೆಯಲ್ಲಿ ಹಸಿರು ಪ್ರವರ್ಗದ ಕಾರ್ಖಾನೆಗಳಿಗೆ ದಿ: 31–7–2013 ರವರೆಗೆ ಕಾಲಾಮಿತಿಯನ್ನು ನಿಗದಿಪಡಿಸಿದ ಈ ಅವಧಿಯೊಳಗೆ ಕಾರ್ಯಾಚರಣೆಯಲ್ಲಿರುವ ಹಸಿರು ಪ್ರವರ್ಗದ ಉದ್ದಿಮೆಗಳು ಪ್ರಸ್ತುತ ಸ್ಥಳಗಳಲ್ಲಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಸ್ಥಳಾಂತರಗೊಳ್ಳುವಂತೆ ಆದೇಶಿಸಿದೆ.

ದೇವದಾಸಿ ಪದ್ಧತಿ

564 (687) ಶ್ರೀ ನರೇಂದ್ರ ಬಾಬು. ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯ ಸರ್ಕಾರ 1992 ರ ನಂತರ ಇದುವರೆವಿಗೂ ಗುರುತಿಸಿದ 18 ವರ್ಷದೊಳಗಿನ ದೇವದಾಸಿ ಹೆಣ್ಣು ಮಕ್ಕಳೆಷ್ಟು; (ವಿವರ ನೀಡುವುದು)

ಆ ರಾಜ್ಯದಲ್ಲಿ ದೇವದಾಸಿಯರ ಮಕ್ಕಳ ಸಂಖ್ಯೆ ಎಷ್ಟು; (ಗಂಡು ಮತ್ತು ಹೆಣ್ಣು ಮಕ್ಕಳ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು);

ಇ) ಇಂತಹ ದೇವದಾಸಿಯರ ಮಕ್ಕಳನ್ನು ಸರ್ಕಾರ ಪೋಷಕತ್ವ ವಿಲ್ಲದ ಅಥವಾ ಅರೆ ಅನಾಥ ಮಕ್ಕಳೆಂದು ಪರಿಗಣಿಸುತ್ತದೆಯೇ?

ಈ) ಈ ಮಕ್ಕಳ ಶಿಕ್ಷಣ, ಆರೋಗ್ಯ ಪೌಷ್ಟಿಕತೆ ರಕ್ಷಣೆ ಮೊದಲಾದವುಗಳ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಶಿಕ್ಷಣ, ಹಕ್ಕು ಜಾರಿ ನಿಯಮದಂತೆ ದೇವದಾಸಿಯರ ಮಕ್ಕಳಿಗೆ ಶಾಲಾ ಪ್ರವೇಶಕ್ಕೆ ಮೀಸಲಾತಿಯನ್ನು ನೀಡಲಾಗಿದೆಯೇ;

ಊ) ಇತ್ತೀಚಿನ ವರ್ಷಗಳಲ್ಲಿ ದೇವದಾಸಿ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಆಯವ್ಯಯದಲ್ಲಿ ಮೀಸಲಿಡುತ್ತಿದ್ದ ಅನುದಾನವನ್ನು ನಿಲ್ಲಿಸಿರುವುದು ನಿಜವೇ ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಮತ್ತು ಆ) ರಾಜ್ಯ ಸರ್ಕಾರವು 18 ವರ್ಷದೊಳಗಿನ ದೇವದಾಸಿ ಹೆಣ್ಣುಮಕ್ಕಳ ಜನಗಣತಿಯನ್ನು ಮಾಡಿರುವುದಿಲ್ಲ.

ಇ) ಪೋಷಕರ ಪಾಲನೆಯಲ್ಲಿರುವುದರಿಂದ ದೇವದಾಸಿಯರ ಮಕ್ಕಳು ಅನಾಥರಲ್ಲ.

ಈ)

1) ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಬಾಲಕಿಯರ ಬಾಲ ಮಂದಿರವನ್ನು ದೇವದಾಸಿ ಮಕ್ಕಳ ಪುನರ್ವಸತಿಗಾಗಿ ಪ್ರಾರಂಭಿಸಲಾಗಿರುತ್ತದೆ.
2) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಬಾಲಮಂದಿರ ಗಳಲ್ಲಿ ದೇವದಾಸಿಯರ ಮಕ್ಕಳಿಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ರಕ್ಷಣೆ ಮತ್ತು ಪೋಷಣೆಗಾಗಿ ಮುಕ್ತ ಪ್ರವೇಶಾವಕಾಶವನ್ನು ಮಾಡಲಾಗಿದೆ.
3) ಇಲಾಖೆಯ ಇತರೆ ಯೋಜನಾ ಕಾರ್ಯಕ್ರಮಗಳಲ್ಲಿ ಒದಗಿಸುವ ಸೇವಾ ಸೌಲಭ್ಯಗಳನ್ನು ದೇವದಾಸಿಯರ ಮಕ್ಕಳಿಗೂ ನೀಡಲಾಗುತ್ತಿದೆ.

ಉ) 6 ರಿಂದ 14 ವಯೋಮಿತಿಯ ಎಲ್ಲ ಮಕ್ಕಳು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಒಳಪಡುತ್ತಾರೆ. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ದಿನಾಂಕ: 28-04-2012 ರಂದು ಅಧಿಸೂಚನೆ ಮೂಲಕ ಹೊರಡಿಸಲಾದ ನಿಯಮಗಳಡಿ ದೇವದಾಸಿಯರ ಮಕ್ಕಳಿಗೆ ಪ್ರತ್ಯೇಕ ಮೀಸಲಾತಿ ಇರುವುದಿಲ್ಲವಾದರೂ "Child belonging to disadvantaged group & Child belonging to weaker section" ಅಡಿಯಲ್ಲಿ ಮೀಸಲಾತಿ ನಿಗದಿಯಾಗಿರುತ್ತದೆ.

ಊ) ಶಿಕ್ಷಣ ಇಲಾಖೆಯು ದೇವದಾಸಿ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕವಾಗಿ ಆಯವ್ಯಯವನ್ನು ನಿಗದಿಪಡಿಸಿರುವುದಿಲ್ಲ. ಆದ್ದರಿಂದ ಅನುದಾನವನ್ನು ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಗ್ರಂಥಾಲಯ

565 (688) ಶ್ರೀ ನರೇಂದ್ರಬಾಬು ಸಿ.ಎ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಮಹಾಲಕ್ಷ್ಮೀ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಗ್ರಂಥಾಲಯಗಳ ಸಂಖ್ಯೆ ಎಷ್ಟು;